**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.**

**ಸಿ.ಸಿ.ನಂ.4158/2023**

ಸಿ.ಡಬ್ಲ್ಯೂ -01

ಪಿ.ಡಬ್ಲ್ಯೂ-01

ಸಾಕ್ಷಿದಾರನ ಹೆಸರು :- ಜಗದೀಶ

ತಂದೆಯ ಹೆಸರು :- ತಿಮ್ಮಯ್ಯ

ವಯಸ್ಸು :- 53 ವರ್ಷ

ಉದ್ಯೋಗ :- ವ್ಯವಸಾಯ

ವಾಸ :- ಮಾರ್ಕೋನಹಳ್ಳಿ

**ಸಾಕ್ಷಿಗೆ ದಿಃ 04.05.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ದಿಃ04.08.2011ರಲ್ಲಿ 9.30ರ ಸಮಯದಲ್ಲಿ ಬಸವರಾಜು, ಶಾಂತಮ್ಮ ಮತ್ತು ಮಂಜು ಎಂಬುವರು ಮಾರ್ಕೋನಹಳ್ಳಿ ಗ್ರಾಮದ ಹಳೇ ಸರ್ವೆ ನಂ.15, ಹೊಸ ಸರ್ವೆ ನಂ.63ರಲ್ಲಿ 2 1/2 ಎಕರೆ ಜಮೀನಿಗೆ ಸಂಬಂಧಿಸಿದಂತೆ ನನಗೆ ಕ್ರಯದ ಕರಾರು ಪತ್ರವನ್ನು ಮಾಡಿಕೊಟ್ಟಿರುತ್ತಾರೆ. ದಿಃ12.08.2011ರಂದು ನಾನು ನನ್ನ ಕೆಲಸದ ನಿಮಿತ್ತ ತಾಲ್ಲೂಕು ಕಛೇರಿಗೆ ಹೋದಾಗ ಮಾರ್ಕೋನಹಳ್ಳಿ ಗ್ರಾಮದ ಸರ್ವೆ ನಂ.15 ಕಡತದಲ್ಲಿ ಇತ್ತು ನಾನು ಅದನ್ನು ತೆಗೆದುಕೊಂಡು ಹೋಗಿ ತಹಸಿಲ್ದಾರ್ ರವರಿಗೆ ನೀಡಿರುತ್ತೇನೆ. ಅದರಲ್ಲಿ ಬಸವರಾಜುರವರು ನನ್ನ ಮತ್ತು ಸಾಕ್ಷಿದಾರರ ಸಹಿಗಳನ್ನು ಫೋರ್ಜರಿ ಮಾಡಿದ ಬಗ್ಗೆ ದಾಖಲೆ ಇತ್ತು. ಚಾ.ಸಾ.3 ಮತ್ತು ಚಾ.ಸಾ.4ರವರ ಸಹಿಯೂ ಸಹ ಫೋರ್ಜರಿಯಾಗಿತ್ತು. ರೂ.25000/- ಮುಂಗಡ ನೀಡಿದ್ದು ರೂ.3,00,000/-ಹಣವನ್ನು ನೀಡಿಲ್ಲವೆಂದು ಫೋರ್ಜರಿ ಮಾಡಿರುತ್ತಾರೆ. ನಾನು ಬಸವರಾಜುರವರನ್ನು ಹೋಗಿ ಕೇಳಿದಾಗ ಸದರಿಯವರು ಏನೋ ಆಗಿರುತ್ತದೆ ಎಂದು ಹೇಳಿರುತ್ತಾರೆ. ಈ ಬಗ್ಗೆ ಏನು ಮಾಡುತ್ತೀಯಾ ಮಾಡಿಕೊ ಎಂದು ಹೇಳಿರುತ್ತಾರೆ. ನಾನು ಈ ಬಗ್ಗೆ ದಾಖಲೆಯನ್ನು ತಹಸಿಲ್ದಾರ್ ರವರಿಂದ ಪಡೆದು

ಪೊಲೀಸ್ ಠಾಣೆಗೆ ದೂರನ್ನು ನೀಡಿರುತ್ತೇನೆ. ದೂರನ್ನು ನಿ.ಪಿ.1 ಎಂದು, ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ದಿಃ21.12.2012ರಲ್ಲಿ ಪೊಲೀಸರು ನನ್ನ ಜಮೀನು ಹಳೇ ಸರ್ವೆ ನಂ.15 ಹೊಸ ಸರ್ವೆ ನಂ.63ನ್ನು ನೋಡಲು ಬಂದಿರುತ್ತಾರೆ.

**ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.